ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಅಯೋಧ್ಯಾ: ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಕುಟುಂಬಸಮೇತರಾಗಿ ಶ್ರೀರಾಮಮಂದಿರಕ್ಕೆ ಭೇಟಿ ನೀಡಿ ರಾಮಲಲಾನ ದರ್ಶನ ಪಡೆದರು.

ಸಂಪುಟ : 46 | ಸಂಚಿಕೆ : 03 | ವೈಶಾಖ-ಜ್ಯೇಷ್ಠ | ಕಲಿಯುಗಾಬ್ದ 5126 | 01-06-2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಸುಸ್ಥಿರ ಪರಿಸರಕ್ಕೆ ಬೇಕಿದೆ ನಿತ್ಯ ಅನುಷ್ಠಾನ

■ ಸಹನಾ ಹೆಗಡೆ

'ಮಾತಾ ಭೂಮಿಃ ಪುತ್ರೋಹಂ ಪ್ರಥಿವ್ಯಾಃ' ಭೂಮಿ ನಮ್ಮ ತಾಯಿ, ನಾವು ಆಕೆಯ ಮಕ್ಕಳು ಎಂದು ಭೂಮಿಯನ್ನು, ಪ್ರಕೃತಿಯನ್ನು ಅರ್ಥಾತ್ ಪರಿಸರವನ್ನು ತಾಯಿಯ ಸ್ಥಾನದಲ್ಲಿ ನೋಡಿರುವ ಶ್ರೇಷ್ಠ ಪರಂಪರೆ ನಮ್ಮದು. ಸನಾತನ ಸಂಸ್ಕೃತಿ ಆಚರಿಸುತ್ತಿದ್ದ ನಮ್ಮ ಹಿರಿಯರಿಗೆ ಪರಿಸರ ಒಂದು ವಿಷಯ ಆಗಿರಲಿಲ್ಲ. ಬದಲಾಗಿ ಅದೊಂದು ನಿತ್ಯ ಅನುಷ್ಠಾನದ ಜೀವನ ಪದ್ಧತಿ ಆಗಿತ್ತು. ನಾಗ ಬನ, ದೇವರ ಕಾಡುಗಳು ಜೀವನದ ಅವಿಭಾಜ್ಯ ಅಂಗ. ನೀರೆಂದರೆ ಪಾವನ ತೀರ್ಥ. ಭೂಮಿ ತುತ್ತು ಕೊಡುವ ತಾಯಿ. ಪಂಚಭೂತಗಳನ್ನು ದೇವರ ರೂಪದಲ್ಲಿ ನೋಡಿ ಅದರ ಆರಾಧನೆ ಮಾಡುತ್ತಿದ್ದ ನಮ್ಮ ಹಿರಿಯರಿಗೆ ಪರಿಸರ ಮಾಲಿನ್ಯ ಒಂದು ಸಮಸ್ಯೆ ಆಗಿ ಕಾಡಿಲ್ಲ. ಆದರೆ ಪರಿಸರ ಎನ್ನುವುದು ಪ್ರಸ್ತುತ ಜಗತ್ತಿನ ಬಹು ದೊಡ್ಡ ಚರ್ಚೆಯ ವಿಷಯ. ಜಗತ್ತಿನ 143ಕ್ಕೂ ಅಧಿಕ ದೇಶಗಳು ಪರಿಸರ ಸಂರಕ್ಷಣೆಗಾಗಿ ಸಾಂಕೇತಿಕ ದಿನವನ್ನು ಆಚರಿಸುತ್ತಿವೆ.

ಪರಿಸರದ ಮೇಲೆ ಪ್ರತಿಯೊಂದು ಅಂಶಗಳಿಗೂ ಸಂಪೂರ್ಣವಾಗಿ ಅವಲಂಬಿತರಾಗಿ ಉಪಕೃತರಾದ ನಾವು ಪ್ರತಿಯಾಗಿ ಪ್ರಕೃತಿಗೆ ಏನು ಕೊಡುತ್ತಿದ್ದೇವೆ? ಈ ಬಗ್ಗೆ ಯೋಚಿಸಿದರೆ ತುಂಬಾ ನಿರಾಶಾದಾಯಕ ಉತ್ತರ ನಮಗೆ ದೊರಕುವುದು. ದಿನನಿತ್ಯದ ಪ್ರತಿ ಹಂತದಲ್ಲೂ ಭೂಮಿ ತಾಯಿಯನ್ನು ಶೋಷಿಸುತ್ತಿದ್ದೇವೆ. ಆಕೆಯ ಒಡಲಿಗೆ ಯಥೇಚ್ಛವಾಗಿ ರಾಸಾಯನಿಕ ಸುರಿಯುತ್ತಿದ್ದೇವೆ. ಮರು ಬಳಕೆ ಆಗದ ಪ್ಲಾಸ್ಟಿಕ್ ಭೂಮಿಗೆ ಮಾಡುವ ಹಾನಿಯ ಬಗ್ಗೆ ತಿಳಿದಿದ್ದರೂ ಅದರ ಬಗ್ಗೆ ಕಾಳಜಿಯಿಲ್ಲ. ದಿನ ನಿತ್ಯ ಬಳಸುವ ರಾಸಾಯನಿಕಯುಕ್ತ ಮಾರ್ಜಕಗಳು ಜಲಮೂಲಗಳನ್ನು ಸೇರಿ ಉಂಟು ಮಾಡುವ ಹಾನಿಯನ್ನು ನಿರ್ಲಕ್ಷಿಸುತ್ತಿದ್ದೇವೆ. ಜೀವನಕ್ಕೆ ಆಧಾರ ಆಗಿರುವ ಆಮ್ಲಜನಕ ಕೊಡುವ ಮರಗಿಡಗಳನ್ನು ನಾವು ಎಷ್ಟಾಗಿ ನೆಡುತ್ತಿದ್ದೇವೆ ಮತ್ತು ಪೋಷಿಸುತ್ತಿದ್ದೇವೆ, ಎನ್ನುವ ಪ್ರಶ್ನೆ ನಮ್ಮಲ್ಲಿ ನಾವು ಕೇಳಿಕೊಳ್ಳಲು ಹಿಂಜರಿಯುವ ಪರಿಸ್ಥಿತಿ ಇದೆ. ಬದಲಾಗಿ ಮರ ಕಡಿದು ತಯಾರಾಗುತ್ತಿರುವ ಟಿಶ್ಯೂ ಪೇಪರ್, ಪೇಪರ್ ಕಪ್ ಅನಿವಾರ್ಯವೋ ಅನ್ನುವಷ್ಟರ ಮಟ್ಟಿಗೆ ಬಳಕೆ ಆಗುತ್ತಿದೆ.

'ಯಾವತ್ ಭೂ ಮಂಡಲಂ ಧತ್ತೇ ಸಮೃಗವನಕಾನನಂ ತಾವತ್ತಿಷ್ಠತಿ ಮೇದಿನ್ಯಾಮ್ ಸಂತತಿ ಪುತ್ರಪೌತ್ರಕೀ' – ಈ ಭೂಮಿಯ ಮೇಲೆ ಎಲ್ಲಿಯವರೆಗೆ ವನ ಕಾನನ ಇರುತ್ತದೆಯೋ ಅಲ್ಲಿಯವರೆಗೆ ಜೀವಿಗಳ ಅಸ್ತಿತ್ವ ಇರುತ್ತದೆ ಎಂಬ ಮಾತು ಮರ ಗಿಡಗಳು ನಮಗೆ ಎಷ್ಟು ಅನಿವಾರ್ಯ ಎಂದು ಹೇಳುತ್ತದೆ.

**ವೃಕ್ಷ ರಕ್ಷಣೆಗಾಗಿ ಜೀವ ಬಲಿದಾನದ ಇತಿಹಾಸ**

1730ರ ಭಾದ್ರಪದ ಮಾಸದ ಶುಕ್ಲ ಪಕ್ಷದಲ್ಲಿ ರಾಜಸ್ಥಾನದ ಜೋಧಪುರ ಗ್ರಾಮದಲ್ಲಿ ನಡೆದ ಒಂದು ಘಟನೆ ಇತಿಹಾಸದಲ್ಲೇ ಅವಿಸ್ಮರಣೀಯ. ಜೋಧಪುರದ ರಾಜ ತನ್ನ ಹೊಸ ಕೋಟೆ ಕಟ್ಟಲು ಬೇಕಾದ ಮರಗಳನ್ನು ತರಲು ತನ್ನ ಸೈನ್ಯವನ್ನು ಕಾಡಿಗೆ ಕಳುಹಿಸಿದ್ದ. ರಾಜನ ಈ ಸೈನ್ಯ ದಟ್ಟವಾಗಿ ಬೆಳೆದ ಖೇಜ್ರಿ (ಶಮಿ/ ಬನ್ನಿ) ಮರಗಳನ್ನು ಕಡಿಯಲು ಪ್ರಾರಂಭಿಸಿತು. ವಿಷಯ ತಿಳಿದ ತಕ್ಷಣ ರಾಜಸ್ಥಾನದ ಖೇಜರ್ಲಿ ಎಂಬ ಗ್ರಾಮದ ಬಿಶ್ನೋಯಿ ಸಮುದಾಯಕ್ಕೆ ಸೇರಿದ ಮಾತಾ ಅಮೃತಾ ದೇವಿ ಮರಕಡಿಯುವುದನ್ನು ಪ್ರತಿಭಟಿಸಿದರು. ಚಿಕ್ಕವಳಿದ್ದಾಗಲೇ ಆಕೆಗೆ ಮರಗಳನ್ನು ಪ್ರೀತಿಸಿ ಸಂರಕ್ಷಿಸಬೇಕೆಂಬ ಬೋಧನೆಯಾಗಿತ್ತು. ಅಲ್ಲಿ ಬೆಳೆದಿರುವ ಮರಗಳು ಆಕೆಯ ಸೋದರ ಸೋದರಿಯರು ಎಂಬ ಭಾವನೆ ಮೂಡಿತ್ತು. ಅಲ್ಲದೆ ಆ ಮರಗಳು ಉಸುಕಿನ ಸುಂಟರಗಾಳಿಯನ್ನು ತಡೆಯುವ ಯೋಧರಾಗಿದ್ದವು. ವೃಕ್ಷಗಳಿಗಾಗಿ ಅವಳ ಹೃದಯ ಪ್ರೀತಿಯಿಂದ ಉಕ್ಕುತ್ತಿತ್ತು.

ಅಮೃತಾ ದೇವಿ ಜೊತೆ ಆ ಹಳ್ಳಿಯ ಬೇರೆ ಹುಡುಗ ಹುಡುಗಿಯರು ದಿನವೂ ಒಂದೊಂದು ಮರಗಳ ಬಳಿ ಹೋಗಿ ಮರಗಳನ್ನು



ಮಾತನಾಡಿಸಿ, ಮರಗಳಾಗಿ ಹುಟ್ಟಿ ಬಂದಿದ್ದಕ್ಕೆ, ಅವುಗಳ ಸಾನಿಧ್ಯ ತಮಗೆ ದೊರಕಿದ್ದಕ್ಕೆ ಸಂತೋಷಿಸುತ್ತಿದ್ದರು. ಈ ಮರಗಳ ಮಧ್ಯೆ ಇರುವ ಜಿಂಕೆ ಮತ್ತಿತರ ವನ್ಯ ಜೀವಿಗಳು ಸಹ ಈ ಹಳ್ಳಿಯ ಜನರ ಜೊತೆ ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಂಡಿದ್ದವು. ಇಂತಹ ಸಂದರ್ಭದಲ್ಲಿ ರಾಜನ ಸೈನ್ಯ ಮರ ಕಡಿಯಲು ಮುಂದಾದಾಗ ತಮ್ಮ ಸಹೋದರರಂತೆ ಇರುವ ಮರಗಳನ್ನು ಕಡಿಯಬೇಡಿ, ಇವು ನಮ್ಮ ನಂಬಿಕೆಯ ಆರಾಧ್ಯ ದೈವ ಎಂದು ಬೇಡಿಕೊಂಡಳು. ಆಕೆಯ ಪ್ರಾರ್ಥನೆಯನ್ನು ಲೆಕ್ಕಿಸದೆ ರಾಜನ ಸೈನ್ಯ ಮರ ಕಡಿಯಲು ಮುಂದಾಯಿತು. ಆಗ ಮಾತಾ ಅಮೃತಾ ದೇವಿ ಮರವನ್ನು ಕಡಿಯದಂತೆ ಮರವನ್ನು ಅಪ್ಪಿಕೊಂಡು ನಿಂತರು. ಆಕೆಯ ಮೂವರು ಹೆಣ್ಣು ಮಕ್ಕಳು ಸಹ ಆಕೆಯನ್ನು ಅನುಸರಿಸಿದರು. ಮರವನ್ನು ಅಪ್ಪಿಕೊಂಡು ನಿಂತವರ ಶಿರಚ್ಛೇದನವಾಯಿತು. ಈ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿ ಹಳ್ಳಿಯ ಜನರೆಲ್ಲ ಬಂದು ಮರಗಳನ್ನು ಅಪ್ಪಿಕೊಂಡು ಮರಕಡಿಯುವುದನ್ನು ಪ್ರತಿಭಟಿಸಿದರು. ಹೀಗೆ ಪ್ರತಿಭಟಿಸಿದವರಲ್ಲಿ 363 ಜನರ ಮಾರಣಹೋಮವೇ ನಡೆಯಿತು. ಜಗತ್ತಿನ ಇತಿಹಾಸದಲ್ಲೇ ವೃಕ್ಷ ರಕ್ಷಣೆಗಾಗಿ ನಡೆದ ಮೊದಲ ಸಾಮೂಹಿಕ ಬಲಿದಾನ ಇದಾಯಿತು.

ಗಿಡ ಮರಗಳಿಗಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದ ಇತಿಹಾಸವನ್ನು ನೆನಪಿಸಿಕೊಂಡಾಗ ಪರಿಸರ ಸಂರಕ್ಷಣೆ ಬಗ್ಗೆ ನಾವು ಏನೆಲ್ಲಾ ಮಾಡಬಹುದು ಎಂಬ ಚಿಂತನೆ ಮನಸ್ಸಿನಲ್ಲಿ ಮೂಡುತ್ತದೆ. ಅಮೃತಾದೇವಿ ಮತ್ತು ಸಹಚರರ ಜೀವ ಬಲಿದಾನದ ದ್ಯೋತಕವಾಗಿ ಮತ್ತು ನಮಗೆ ಸರ್ವಸ್ವವನ್ನೂ ನೀಡುತ್ತಿರುವ ಪ್ರಕೃತಿ ಮಾತೆಗೆ ಕೃತಜ್ಞತೆ ಸಮರ್ಪಣೆಗಾಗಿ ಪ್ರತಿ ವರ್ಷ ಆಗಸ್ಟ್ ತಿಂಗಳ ಕೊನೆಯ ಭಾನುವಾರ ದೇಶದಾದ್ಯಂತ ಅನೇಕಾನೇಕ ಸ್ವಯಂಸೇವಕರು, ಪರಿಸರ ಪ್ರಿಯರು ಪ್ರಕೃತಿ ವಂದನ ಎನ್ನುವ ಪರಿಕಲ್ಪನೆಯಲ್ಲಿ ಮಾತೆ ಪ್ರಕೃತಿಗೆ ಕೃತಜ್ಞತಾ ಪೂರ್ವಕ ವಂದನೆ ಸಲ್ಲಿಸುತ್ತಾರೆ. ಸಾಂಕೇತಿಕವಾಗಿ ಗಿಡಮರಗಳಿಗೆ ಪೂಜೆ ಸಲ್ಲಿಸುವುದಲ್ಲದೇ ಪರಿಸರ ಸ್ನೇಹಿ ಜೀವನದ ಸಂಕಲ್ಪ ಮಾಡುತ್ತಾರೆ. ಭೂ ಸುಪೋಷಣ ಮಾಡುವ ಬಗ್ಗೆ, ಹೆಚ್ಚು ಹೆಚ್ಚು ಗಿಡಗಳನ್ನು ನೆಡುವ ಬಗ್ಗೆ ಯೋಜನೆ ಮಾಡಿ ಕಾರ್ಯ ಪ್ರವೃತ್ತರಾಗುತ್ತಾರೆ. ಸ್ಥಳೀಯವಾಗಿ ಉಪಲಬ್ಧ ಇರುವ ಬೀಜಗಳನ್ನು ಸಂಗ್ರಹಿಸಿ ಮನೆಗಳಲ್ಲಿಯೇ ಗಿಡಗಳನ್ನು ತಯಾರಿಸಿ ಬೀಜಾರೋಪಣದಿಂದ ಸಸ್ಯಾರೋಪಣದ ಕಾರ್ಯ ಸಹ ನಡೆಯುತ್ತದೆ.

ಈ ರೀತಿ ಕೃತಜ್ಞತಾ ಭಾವದಿಂದ ಪ್ರಕೃತಿಗೆ ವಂದಿಸುವ ಕಾರ್ಯ ಸಾರ್ವತ್ರಿಕವಾಗಿ ಪ್ರತಿ ಮನೆಯಲ್ಲೂ ನಡೆಯುವಂತಾದರೆ ಪ್ರಕೃತಿ ವಂದನ ಹೆಚ್ಚು ಹೆಚ್ಚು ಮಹತ್ವ ಪಡೆದು ಕೊಳ್ಳುತ್ತದೆ. 1973 ರ ಜೂನ್ 5 ರಂದು ಪ್ರಾರಂಭವಾದ ವಿಶ್ವ ಪರಿಸರ ದಿನವನ್ನು ಒಪ್ಪಿಕೊಂಡು ಆಚರಿಸುತ್ತಿರುವ 143ಕ್ಕೂ ಹೆಚ್ಚಿನ ದೇಶಗಳು ಸಹ ಭಾರತದಲ್ಲಿ ಪರಿಸರಕ್ಕೆ ನಡೆದ ತ್ಯಾಗ ಬಲಿದಾನದ ಶ್ರೇಷ್ಠತೆ ಮಹತ್ವ ತಿಳಿದುಕೊಳ್ಳಲು ಅವಕಾಶವಾಗುತ್ತದೆ. ಮತ್ತು ಪ್ರಕೃತಿಯನ್ನು ಆರಾಧಿಸುವ ಭಾರತೀಯ ಜೀವನಶೈಲಿ ಹೇಗೆ ವಿಶ್ವಕ್ಕೆ ಮಾದರಿಯಾಗಬಲ್ಲದು ಎಂಬ ಅಂಶಗಳು ಸಹ ಪ್ರಚಲಿತಕ್ಕೆ ಬರಲು ಸಹಾಯವಾಗುತ್ತದೆ. ನಾವು ಪ್ರಕೃತಿಯ ಒಂದು ಭಾಗ ನಾವು ಅದರ ಮಾಲಿಕರಲ್ಲ. ಪ್ರಕೃತಿಯಿಂದಲೆ ನಮ್ಮ ಅಸ್ತಿತ್ವ ಎನ್ನುವ ಶ್ರೇಷ್ಠ ಭಾರತೀಯ ಚಿಂತನೆ ಭೂಮಿ, ಜಲ, ವಾಯು, ಅಗ್ನಿ ಆಕಾಶಗಳಲ್ಲಿ ಭಗವಂತನನ್ನು ಕಾಣುವ ನಮ್ಮ ಪೂರ್ವಜರ ಶ್ರೇಷ್ಠ ಚಿಂತನೆ ಬಗ್ಗೆ ಬೆಳಕು ಚೆಲ್ಲಿದಂತಾಗುತ್ತದೆ.

ಪರಿಸರ ಮತ್ತು ಅಭಿವೃದ್ಧಿ ಎನ್ನುವ ವಿಷಯ ಬಂದಾಗ ನಾವು ಸದಾ ನೆನಪಿಡಲೇ ಬೇಕಾದದ್ದು ನಮ್ಮ ಅಭಿವೃದ್ಧಿಯ ನಾಗಾಲೋಟ ಪರಿಸರ ನಾಶಮಾಡಿ ತನ್ಮೂಲಕ ನಮ್ಮ ಜೀವ ಮತ್ತು ಜೀವನಕ್ಕೆ ಕಂಟಕಪ್ರಾಯವಾಗುವುದಲ್ಲ. ಅಭಿವೃದ್ಧಿ ಹೆಸರಿನಲ್ಲಿ ನೈಸರ್ಗಿಕ ಸಂಪತ್ತನ್ನು ಹಾಳು ಮಾಡುವ ಬದಲು ಪರ್ಯಾಯ ಮಾರ್ಗ, ವ್ಯವಸ್ಥೆ ಬಗ್ಗೆ ಚಿಂತಿಸಬೇಕು. ಅಷ್ಟೇ ಅಲ್ಲದೆ ನಮ್ಮ ದಿನನಿತ್ಯ ಜೀವನದಲ್ಲಿ ಪರಿಸರಕ್ಕೆ ಹಾನಿಯಾಗದಂತೆ ನಡೆದುಕೊಳ್ಳಲು ಸಾಧ್ಯ ಎನ್ನುವ ಚಿಂತನೆ ಪ್ರತಿ ಮನಸ್ಸಿನಲ್ಲಿ ಮೂಡಿದರೆ ಸಕಾರಾತ್ಮಕ ಬದಲಾವಣೆ ಸಾಧ್ಯ. ನಾವು ಬಳಸುವ ಸಾಬೂನು ಮಾರ್ಜಕ ಶ್ಯಾಂಪೂ ರಾಸಾಯನಿಕ ಮುಕ್ತವಾಗಿದ್ದರೆ ಒಂದು ಹಂತದ ಜಲ ಮಾಲಿನ್ಯ ತಪ್ಪಿಸಬಹುದು. ಮನೆಯ ಸುತ್ತ ಗಿಡ ಬೆಳೆಸುವುದು ತಾರಸಿ ತೋಟ ಮಾಡುವುದು ಕೂಡ ಪರಿಸರಕ್ಕೆ ನಮ್ಮ ಚಿಕ್ಕ ಕೊಡುಗೆ ಆಗಬಹುದು. ಪ್ಲಾಸ್ಟಿಕ್ ಬಳಕೆ ಸಾಧ್ಯವಾದಷ್ಟು ಕಡಿಮೆ ಮಾಡುವುದು ಮರು ಬಳಕೆ ಆಗದ ಪ್ಲಾಸ್ಟಿಕ್ ಸಂಪೂರ್ಣ ನಿಷೇಧ ಬಹಿಷ್ಕರಿಸುವುದು, ಬಟ್ಟೆ ಚೀಲ, ಮರು ಬಳಕೆ ಮಾಡಬಹುದಾದ ನೀರಿನ ಬಾಟಲ್ ನಮ್ಮ ಜೊತೆ ಕೊಂಡೊಯ್ಯುವುದು, ಚಿಕ್ಕ ಸ್ಟೀಲ್ ಲೋಟ ಸದಾ ನಮ್ಮ ಜೊತೆ ಕೊಂಡೊಯ್ಯುವ ಅಭ್ಯಾಸ ಮಾಡಿಕೊಂಡರೆ ಪರಿಸರಕ್ಕೆ ಹಾನಿ ಮಾಡುವ ಏಕ ಬಳಕೆ ಲೋಟಗಳ ಅವಶ್ಯಕತೆ ಬರುವುದಿಲ್ಲ.



ಪರಿಸರ ಮತ್ತು ನಾವು ಬೇರೆ ಬೇರೆ ಅಲ್ಲ. ನಮ್ಮ ಸನಾತನ ಚಿಂತನೆ ಮೆಲುಕು ಹಾಕಿಕೊಂಡರೆ ನಾವು ಹೇಗೆಲ್ಲಾ ಪರಿಸರ ಪೋಷಣೆ ಮಾಡಬಹುದು ಎನ್ನುವ ಯೋಚನೆಗಳಿಗೆ ತನ್ನಿಂದ ತಾನೇ ಮಾರ್ಗ ತೆರೆದುಕೊಳ್ಳುತ್ತದೆ. ವೈಯಕ್ತಿಕ ಬದಲಾವಣೆಗಳು ಸಮಾಜವನ್ನು ಪ್ರೇರೇಪಿಸಿ ಸಮಾಜವನ್ನು ಸಕಾರಾತ್ಮಕತೆಯತ್ತ ಕೊಂಡೊಯ್ಯುತ್ತದೆ. ಪ್ರತಿಯೊಬ್ಬರಲ್ಲೂ ಪರಿಸರದ ಬಗ್ಗೆ ವೈಯಕ್ತಿಕ ಕಾಳಜಿ ಜವಾಬ್ದಾರಿ ಬಂದರೆ ಯಾವ ವ್ಯವಸ್ಥೆಯನ್ನು ದೂಷಿಸುವ ಪರಿಸ್ಥಿತಿ ಬರಲಾರದು. ಹಾಗಾಗಿ ನಮ್ಮ ಚಿತ್ತ ಪ್ರಕೃತಿ ವಂದನೆಯತ್ತ. ■

## ಸಂಸ್ಮರಣೆ

# ಗಣೇಶ್ ದಾಮೋದರ್ ಸಾವರ್ಕರ್
## (13 ಜೂನ್, 1879 – 16 ಮಾರ್ಚ್ 1946)

ಗಣೇಶ್ ದಾಮೋದರ್ ಸಾವರ್ಕರ್ ದೇಶಭಕ್ತ ಕುಟುಂಬಕ್ಕೆ ಸೇರಿದವರು. ದೇಶಕ್ಕಾಗಿ ಅವ್ಯಾಹತ ತುಡಿದ ಮಿಡಿದ ಮತ್ತು ಮಡಿದ ವೀರ ಸಾವರ್ಕರ್ ಇವರ ಸಹೋದರ. ದೇಶ ಭಕ್ತಿಯ ವಾತಾವರಣವನ್ನು ಇವರ ಮನೆಯೇ ಸೃಷ್ಟಿಸಿತ್ತು. ಬಾಲ್ಯದಲ್ಲೇ ತಾಯಿ ನೆಲ, ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅಪಾರವಾದ ಅಭಿಮಾನವನ್ನು ಗಣೇಶ್ ಸಾವರ್ಕರ್ ಬೆಳೆಸಿಕೊಂಡಿದ್ದರು.

**ಪರಿಚಯ:** ಗಣೇಶ್ ದಾಮೋದರ ಸಾವರ್ಕರ್ ಅವರು 1879ರ ಜೂನ್ 13 ರಂದು ಮಹಾರಾಷ್ಟ್ರದಲ್ಲಿ ಜನಿಸಿದರು. ತಂದೆ ದಾಮೋದರ್ ಸಾವರ್ಕರ್ ತಾಯಿ ಯಶೋಧ. ಮನೆಯಲ್ಲಿ ಹಿರಿಯ ಮಗನಾಗಿ ಜನಿಸಿ ದೇಶ ಪ್ರೇಮದೆಡೆಗೆ ತಮ್ಮ ಒಡ ಹುಟ್ಟಿದವರನ್ನು ಸೆಳೆದವರು. ಗಣೇಶ್ ಸಾವರ್ಕರ್ ಬಹು ಮುಖ್ಯವಾಗಿ ವೀರ ಸಾವರ್ಕರ್ ಅವರೊಳಗೆ ದೇಶ ಭಕ್ತಿಯ ಕಿಡಿ ಹೊತ್ತಿಸಿದವರು. ಅವರೊಬ್ಬ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಾಗಿ ಬೆಳೆಯುವುದರಲ್ಲಿ ಇವರ ಮಹತ್ತರದ ಪಾತ್ರವಿದೆ. ತಮ್ಮ ಕಿರಿಯ ಸಹೋದರ ನಾರಾಯಣ ಮತ್ತು ಸಹೋದರಿ ಮೈನಾಬಾಯಿ ಅವರಿಗೂ ಗಣೇಶ್ ನೀತಿಬೋಧಿಸುತ್ತಿದ್ದರು. "ನಮ್ಮ ಇಡೀ ಕುಟುಂಬ ಈ ದೇಶಕ್ಕಾಗಿ ಪ್ರಾಣ ಅರ್ಪಿಸಲು ಸಿದ್ಧ" ಎಂಬುದನ್ನು ಅವರು ನಿರ್ಭೀತಿಯಿಂದ ಹೇಳುತ್ತಿದ್ದರು.

ಗಣೇಶ್ ಸಾವರ್ಕರ್ ಓರ್ವ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ, ರಾಜಕೀಯ ಚಿಂತಕ, ಮಹತ್ವಾಕಾಂಕ್ಷಿ. 'ಅಭಿನವ್ ಭಾರತ್ ಸೊಸೈಟಿ' ಎಂಬ ದೇಶಪರ ಸಂಘಟನೆಯ ಸ್ಥಾಪಕ. ಅವರು ಬ್ರಿಟಿಷ್ ಆಡಳಿತವನ್ನು ಕಟುವಾಗಿ ಟೀಕಿಸಿ ಅವರ ಸಾರ್ವಭೌಮತ್ವವನ್ನು ವಿರೋಧಿಸಿ ಜೀವಾವಧಿ ಶಿಕ್ಷೆಗೆ ಒಳಗಾದವರು. ತಾಯಿ ನೆಲವನ್ನು ಇನ್ನಿಲ್ಲದಂತೆ ಗೌರವಿಸುತ್ತಿದ್ದ ಗಣೇಶ್ ಸಾವರ್ಕರ್ ಮಹಾರಾಷ್ಟ್ರದಿಂದ ಗಡಿಪಾರು ಕೂಡ ಆಗಿದ್ದರು. ದೇಶದ ವಿಚಾರಕ್ಕೆ ಬಂದಾಗ ಅವರು ಯಾವುದಕ್ಕೂ ಎದೆಗುಂದಿದವರಲ್ಲ. ಪೆಟ್ಟು ತಿಂದಷ್ಟೂ ಸೆಟೆದು ನಿಲ್ಲುತ್ತಿದ್ದರು. ಇಂದು ಅತೀ ದೊಡ್ಡ ರಾಷ್ಟ್ರೀಯ ಸಂಘಟನೆಯಾಗಿ ಹೆಸರುಗಳಿಸಿರುವ ಮತ್ತು ಕೋಟ್ಯಾಂತರ ಕಾರ್ಯಕರ್ತರನ್ನು



ಹೊಂದಿರುವ ಆರ್ ಎಸ್ ಎಸ್ ಕನಸಿನ ಬೀಜವನ್ನು ಬಿತ್ತಿದವರಲ್ಲಿ ಗಣೇಶ್ ಸಾವರ್ಕರ್ ಕೂಡ ಒಬ್ಬರು. ಸಂಘ ಸಂಸ್ಥಾಪಕ ಡಾ. ಕೇಶವ ಬಲಿರಾಮ್ ಹೆಡಗೇವಾರ್ ಜತೆಗೆ ಸೇರಿ ಆರ್‌ಎಸ್‌ಎಸ್ ಅನ್ನು ದೇಶದಾದ್ಯಂತ ವಿಸ್ತರಿಸಲು ಶ್ರಮಪಟ್ಟವರು.

**ಅಭಿನವ್ ಭಾರತ್ ಸೊಸೈಟಿ:** ಗಣೇಶ್ ದಾಮೋದರ ಸಾವರ್ಕರ್ ಅವರು 1904ರಂದು ನಾಸಿಕ್‌ನಲ್ಲಿ ಅಭಿನವ್ ಭಾರತ್ ಸೊಸೈಟಿಯನ್ನು ಹುಟ್ಟು ಹಾಕಿದರು. ಅಣ್ಣ ಹುಟ್ಟು ಹಾಕಿದ ಸಂಘಟನೆ ವೀರ ಸಾವರ್ಕರ್ ಅವರಿಗೆ ಪ್ರೇರಣೆಯಾಯಿತು. ನೂರಾರು ಕ್ರಾಂತಿಕಾರಿಗಳು ಮತ್ತು ರಾಜಕೀಯ ಕಾರ್ಯಕರ್ತರನ್ನು ಈ ಸಂಘಟನೆಯು ಬೆಳೆಸಿತು. ಈ ದೇಶದ ಹಲವಾರು ಕ್ರಾಂತಿಕಾರಿ ಹೋರಾಟಗಾರರಿಗೆ ಅಭಿನವ್ ಭಾರತ್ (ಮಿತ್ರಮೇಳ) ತವರು ಮನೆ ಅಥವಾ ಗರಡಿಮನೆ. ದೇಶದ ಬಗೆಗಿನ ಮಹತ್ವದ ಚರ್ಚೆಗಳು ಅಭಿನವ್ ಭಾರತ್ ಸಭೆಯಲ್ಲಿ ನಡೆಯುತ್ತಿದ್ದವು. ಬ್ರಿಟಿಷ್ ಸಾಮ್ರಾಜ್ಯದ ನಾಶಕ್ಕೆ ಅಂತಲೇ ಈ ಸಂಘಟನೆ ದುಡಿಯುತ್ತಿತ್ತು.

ಗಣೇಶ್ ದಾಮೋದರ್ ಸಾವರ್ಕರ್ ತಾವು ಇರುವ ಗಳಿಗೆಯವರೆಗೂ ದೇಶದ ಬಗೆಗೆ ಅತೀವ ಆಸೆ ಕನಸುಗಳನ್ನು ಇಟ್ಟುಕೊಂಡಿದ್ದವರು. ಅವರು 1945ರ ಮಾರ್ಚ್ 16 ರಂದು ತೀರಿಕೊಂಡರು. ವಿಪರ್ಯಾಸವೆಂದರೆ ಒಬ್ಬ ಸಾಹಸಿ ಸ್ವಾತಂತ್ರ್ಯ ಹೋರಾಟಗಾರನೊಬ್ಬ ದೇಶದ ಇತಿಹಾಸದ ಪುಟಗಳಲ್ಲಿ ಮಾಯವಾದರು. ಗಣೇಶ್ ಸಾವರ್ಕರ್ ಅಂತಹ ವ್ಯಕ್ತಿಯನ್ನು ಬಹುಕಾಲ ನೆನಪಿಡಬೇಕಿದೆ. ಅವರನ್ನು ತಲೆಮಾರುಗಳಿಗೆ ತಲುಪಿಸಬೇಕಿದೆ. ಸುನಿತಾ ದೇಶಪಾಂಡೆ ಮತ್ತು ಇನ್ನಿತರ ಲೇಖಕರು ಬರೆದಿರುವ ಗಣೇಶ ದಾಮೋದರ್ ಸಾವರ್ಕರ್ ಜೀವನ ಚರಿತ್ರೆಯನ್ನು ಓದಿದರೆ ಅವರೆಂಥ ಅಸಾಮಾನ್ಯ ವ್ಯಕ್ತಿ ಎಂಬುದು ತಿಳಿಯುತ್ತದೆ.

# ಸಫಲತೆಗೆ ಹೊಸದೊಂದು ಅರ್ಥ – ಸ್ವರೂಪವರ್ಧಿನಿ

ಪುಣೆಯ ಮಲಿನ ಸೇವಾಬಸ್ತಿಗಳ ಕೊಳೇಗೇರಿಯಲ್ಲಿ ಬೆಳೆದ ಕಣ್ಣಿಲ್ಲದ ಚಂದ್ರಕಾಂತನು ಇಂದು ತಾನು ಓದಿ ಶಿಕ್ಷಣ ಪಡೆದ ಅಂಧರ ಶಾಲೆಗೆ ಪ್ರಾಂಶುಪಾಲನಾಗಿದ್ದಾನೆ. ಇದೇ ರೀತಿಯ ಕಥೆ ಸಂತೋಷನದ್ದು ಕೂಡ. ಮಲ್ಲಕಂಬದಲ್ಲಿ ರಾಷ್ಟ್ರೀಯ ಮಟ್ಟದ ಆಟಗಾರನಾಗಿದ್ದು ಹಾಗೂ ಪುಣೆಯಲ್ಲಿ ಪೊಲೀಸ್ ಪೇದೆಯಾಗಿರುವ ಸಂತೋಷ್ ಅವರು ಬಾಲ್ಯದಲ್ಲೇ ಸ್ವರೂಪವರ್ಧಿನಿಯ ಸಂಪರ್ಕಕ್ಕೆ ಬರದಿದ್ದರೆ ಅವರ ಬಾಲ್ಯವು ತೀವ್ರ ಬಡತನ ಹಾಗೂ ಅಭಾವಗಳಿಂದ ಕೂಡಿರುತ್ತಿತ್ತು. ಅಷ್ಟೇ ಅಲ್ಲದೆ ಕಳೆದ 16 ವರ್ಷಗಳಲ್ಲಿ, ಹೆಣ್ಣಾಗಿ ಜನಿಸಿ ಹಲವು ಬಂಧನಗಳ ವಿರುದ್ಧ ಹೋರಾಡಿದ ಪುಣೆಯ ಸುತ್ತಮುತ್ತಲಿನ ಹಳ್ಳಿಗಳ 3000 ಹೆಣ್ಣು ಮಕ್ಕಳು ದಾದಿಯರಾಗಿ (ನರ್ಸ್) ಆತ್ಮನಿರ್ಭರರಾಗಿ ಗೌರವಾನ್ವಿತ ಜೀವನವನ್ನು ನಡೆಸುತ್ತಿದ್ದಾರೆ.

ಪುಣೆಯ ಸುತ್ತಮುತ್ತಲಿನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಈ ಸಾಮಾಜಿಕ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಸೇವಾಭಾರತಿಗೆ ಸಂಬಂಧಿಸಿದ ಬಹು ಆಯಾಮಗಳುಳ್ಳ 'ಸ್ವ-ರೂಪವರ್ಧಿನಿ' ಪ್ರಕಲ್ಪವನ್ನು ತಿಳಿಯಬೇಕು. ಸಂಘದ ಸ್ವಯಂಸೇವಕರಾದ ಸ್ವರ್ಗೀಯ ಕಿಶಾಭಾವು ಪಟವರ್ಧನ್ ರವರು ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಜೀವನವನ್ನು ರೂಪಿಸುವ ಕನಸನ್ನು 1970ರಲ್ಲಿ ಸ್ವರೂಪವರ್ಧಿನಿಯ ರೂಪದಲ್ಲಿ ಕಂಡಿದ್ದರು. ಇಂದು 200 ಜನ ಮೊದಲನೆ ಹಾಗೂ ಎರಡನೇ ಶ್ರೇಣಿಯ ಆಫೀಸರ್‌ಗಳಾಗುವ ಮೂಲಕ ಆ ಕನಸು ಈಡೇರಿದೆ.

ಸ್ವರ್ಗೀಯ ಕಿಶಾಭಾವು ಅವರ ಪ್ರೇರಣೆಯಿಂದ ಶುಲ್ಕರಹಿತ ಕೋಚಿಂಗ್ ಸೆಂಟರ್‌ಗೆ ಬರುತ್ತಿದ್ದ 11ನೇ ತರಗತಿಯ ವಿಶ್ವಾಸ್ ಎಂಬ ಮೇಧಾವಿ ವಿದ್ಯಾರ್ಥಿ ತನ್ನ ಬಿಡುವಿನ ಸಮಯದಲ್ಲಿ ಚಂದ್ರಕಾಂತನಿದ್ದ ಭೀಮನಗರದ ಸೇವಾಬಸ್ತಿಗೆ ಬಂದು ಕೆಲವು ವರ್ಷಗಳ ಕಾಲ ಪಾಠ ಹೇಳಿಕೊಟ್ಟಿದ್ದರು. ವಿಶ್ವಾಸ್ ಅವರ ಪರಿಶ್ರಮ ಫಲ ನೀಡಿತ್ತು, ಹೈಸ್ಕೂಲ್‌ನಲ್ಲಿ ಚಂದ್ರಕಾಂತ್ 70% ಅಂಕಗಳೊಂದಿಗೆ ಉತ್ತೀರ್ಣರಾಗಿದ್ದರು. ವಿಶ್ವಾಸ್ ತಮ್ಮ ಎಂಜಿನಿಯರಿಂಗ್ ವ್ಯಾಸಂಗದ ನಡುವೆಯೂ ಚಂದ್ರಕಾಂತರಿಗೆ ಪಾಠ ಹೇಳಿಕೊಡುವುದನ್ನು ಮುಂದುವರಿಸಿದರು. ಇದರ ನಂತರ ಚಂದ್ರಕಾಂತ್ ಬಿ.ಎ, ಎಂ.ಎ ಹಾಗೂ ಎಂ.ಎಡ್ ವ್ಯಾಸಂಗವನ್ನು ಮುಗಿಸಿದರು.

ಇದೇ ತರಹ, ಸೇವಾಬಸ್ತಿಯ ಸಂತೋಷ್ ಓದಿಗಿಂತ ಆಟದ ಮೇಲೆ ಹೆಚ್ಚಿನ ಆಸಕ್ತಿ ಹೊಂದಿದ್ದನು. ಒಂದು ಕ್ರೀಡಾ ಶಿಬಿರದಲ್ಲಿ ಸಂತೋಷ್‌ನಲ್ಲಿ ಒಬ್ಬ ಒಳ್ಳೆಯ ಕ್ರೀಡಾಪಟು ಆಗುವ ಎಲ್ಲಾ ಸಾಧ್ಯತೆಗಳನ್ನು ಗಮನಿಸಿದ ಸ್ವರೂಪವರ್ಧಿನಿಯ ಕಾರ್ಯಕರ್ತರು ಅವನ ಶುಲ್ಕ ಹಾಗೂ ಇನ್ನಿತರ ಖರ್ಚುಗಳನ್ನು ವಹಿಸಿಕೊಂಡು ಒಂದು ಕ್ರೀಡಾ ಅಕಾಡೆಮಿಯಲ್ಲಿ ಪ್ರವೇಶ ದೊರಕಿಸಿಕೊಟ್ಟರು. ಇಂದು ಸಂತೋಷ್ ಅಖಿಲ ಭಾರತ ಮಟ್ಟದ ಮಲ್ಲಕಂಬ ಕ್ರೀಡಾಪಟು ಹಾಗೂ ಮಹಾರಾಷ್ಟ್ರದ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವೆಲ್ಲ ಕೆಲವು ಉದಾಹರಣೆಗಳಷ್ಟೇ. ವರ್ಧಿನಿಯ ಸಂಪರ್ಕಕ್ಕೆ ಬಂದ ಚಂದ್ರಕಾಂತ್, ವಿಶ್ವಾಸ್, ಸಂತೋಷ್ ರಂತಹ ನೂರಾರು ಬಾಲಕರು ಇಂದು ಸಮಾಜಕ್ಕೆ ಮಾದರಿಯಾಗಿದ್ದಾರೆ.

1979ನೇ ಇಸವಿಯಲ್ಲಿ ಪುಣೆಯ ಸೇವಾಬಸ್ತಿಗಳಲ್ಲಿ ವಾಸಿಸುವ ಪ್ರತಿಭಾವಂತ ಬಾಲಕರನ್ನು ಹುಡುಕಿ ಅವರ ಸರ್ವಾಂಗೀಣ ಅಭಿವೃದ್ಧಿಯ ಗುರಿಯೊಂದಿಗೆ ಈ ಪ್ರಕಲ್ಪವು ಅಸ್ತಿತ್ವಕ್ಕೆ ಬಂತು. ಚಿಕ್ಕ ಸ್ವರೂಪದಲ್ಲಿ ಪ್ರಾರಂಭವಾದ ಈ ಪ್ರಕಲ್ಪವು ಇಂದು ವಿಸ್ತೃತ ಆಯಾಮಗಳನ್ನು ಹೊಂದಿದೆ. ವರ್ಧಿನಿಯ ಮೂಲಕ ರಾಜ್ಯಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅತಿ ಕಡಿಮೆ ಶುಲ್ಕದೊಂದಿಗೆ ಕೋಚಿಂಗ್ ನೀಡಲಾಗುತ್ತಿದೆ. ಈ ಕೋಚಿಂಗ್ ಸೆಂಟರ್‌ನಲ್ಲಿ ಓದಿದ 200ಕ್ಕೂ ಹೆಚ್ಚು ಬಡ ಮಕ್ಕಳು ಇಂದು ಪ್ರಥಮ ಹಾಗೂ ದ್ವಿತೀಯ ದರ್ಜೆಯ ಅಧಿಕಾರಿಗಳಾಗಿದ್ದಾರೆ. ಸಂಸ್ಥೆಯ ಮೊಬೈಲ್ ಲ್ಯಾಬೊರೇಟರಿಯು ಹಳ್ಳಿ-ಹಳ್ಳಿಗಳನ್ನು ಸಂಚರಿಸಿ ಮಕ್ಕಳಿಗೆ ವಿಜ್ಞಾನದ ಪ್ರಯೋಗಗಳನ್ನು ತೋರಿಸಿ ವಿಜ್ಞಾನದ ಮೇಲೆ ಅಭಿರುಚಿ ಹೆಚ್ಚಿಸುತ್ತಿದೆ. ಕಳೆದ 17 ವರ್ಷದಿಂದ ನಡೆಯುತ್ತಿರುವ ಈ ಪ್ರಯೋಗ ಶಾಲೆಯ ಮೂಲಕ ಸುಮಾರು 100 ಹಳ್ಳಿಗಳ ಸಾವಿರಾರು ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಅವರ ತಿಳುವಳಿಕೆಯ ವಿಕಾಸವಾಗಿದೆ. ಇದರ ಹೊರತಾಗಿ ಮಹಿಳೆಯರ ಸ್ವಾವಲಂಬನ ಕೇಂದ್ರ, ಕೌನ್ಸೆಲಿಂಗ್ ಕೇಂದ್ರ, ಪಾಕೊಲಿ ಮಾಂಟೆಸರಿ ಸ್ಕೂಲ್ ಹಾಗೂ ನೈಪುಣ್ಯ ಅಭಿವೃದ್ಧಿಯಂತಹ ಅನೇಕ ಆಯಾಮಗಳು ಸಹ ಇಂದು ಈ ಪ್ರಕಲ್ಪದ ಮೂಲಕ ನಡೆಯುತ್ತಿವೆ.

ಸಂಪರ್ಕಿಸಿ: ಶಿರೀಷ್ ಪಟವರ್ಧನ್, 9822675765

## ಎಲ್ಲೋ ಕೇಳಿದ ಕಥೆ

### ವಿನಯವಿದ್ದರೆ ವಿದ್ಯೆ ಲಭ್ಯ



ರಾಮ-ರಾವಣರ ಯುದ್ಧ ಮುಕ್ತಾಯವಾಯಿತು. ರಾಮಬಾಣಗಳಿಂದ ರಾವಣ ಭೂಮಿಗೆ ಉರುಳಿದ್ದನು. ಅವನು ಅಸುರನಾದರೂ, ಪಂಡಿತನಾಗಿದ್ದ, ವೇದ ಜ್ಞಾನಿಯಾಗಿದ್ದ, ರಾಜನೀತಿ ಹಾಗೂ ಧರ್ಮ ಗ್ರಂಥಗಳನ್ನು ಅಮೂಲಾಗ್ರವಾಗಿ ತಿಳಿದುಕೊಂಡಿದ್ದನು. ರಾವಣನ ಸಾವು ಸಮೀಪಿಸುತ್ತಿತ್ತು. ಶ್ರೀರಾಮ ಸಹೋದರ ಲಕ್ಷ್ಮಣನಿಗೆ "ಲಕ್ಷ್ಮಣ, ಈ ಯುಗದ ಸರ್ವಶ್ರೇಷ್ಠ ವಿದ್ವಾಂಸ ಕೊನೆಯುಸಿರೆಳೆಯುತ್ತಿದ್ದಾನೆ. ನೀನು ಅವನ ಹತ್ತಿರ ಹೋಗಿ ನೀತಿ ಶಿಕ್ಷಣವನ್ನು ಕಲಿತುಕೊಂಡು ಬಾ" ಎಂದನು. ಲಕ್ಷ್ಮಣ ರಾವಣನ ಹತ್ತಿರ ಹೋಗಿ ತನಗೆ ನೀತಿ ಶಿಕ್ಷಣವನ್ನು ಬೋಧಿಸುವಂತೆ ಕೇಳಿಕೊಂಡನು. ಆದರೆ ರಾವಣ ಏನೂ ಮಾತನಾಡಲಿಲ್ಲ. ಲಕ್ಷ್ಮಣ ಇನ್ನೆರಡು ಬಾರಿ ಅದೇ ವಿನಂತಿಯನ್ನು ಮಾಡಿದನು. ಆದರೂ ರಾವಣ ಮೌನವಾಗಿದ್ದನು. ಲಕ್ಷ್ಮಣ ನಿರಾಶನಾಗಿ ಮರಳಿದನು.


ರಾಮ ಲಕ್ಷ್ಮಣನನ್ನು "ಹೋಗಿ ಬಂದೆಯಾ? ರಾವಣ ಏನನ್ನು ಬೋಧಿಸಿದನು?" ಎಂದು ಕೇಳಿದಾಗ ಲಕ್ಷ್ಮಣ, ಅವನು ಏನು ಹೇಳಲಿಲ್ಲವೆಂದು ದೂರಿದನು. ಆಗ ರಾಮ, "ಸೋದರ, ಶತ್ರುವಾಗಿ ಅವನ ಹತ್ತಿರ ಹೋಗುವುದಲ್ಲ. ನೀನು ಗರ್ವದಿಂದ ಅವನ ತಲೆಯ ಬಳಿ ನಿಂತು ಕೇಳಿದೆ. ಹಾಗಾಗಿ ಅವನು ಮಾತಾಡಲಿಲ್ಲ. ವಿದ್ಯಾಕಾಂಕ್ಷಿಯಾಗಿ ವಿನಮ್ರವಾಗಿ ಹೋಗು. ಕಾಲ ಬಳಿ ನಿಂತು ಕೇಳಿಕೋ" ಎಂದನು. ಲಕ್ಷ್ಮಣ ತನ್ನ ತಪ್ಪನ್ನು ಒಪ್ಪಿಕೊಂಡು ಅಣ್ಣನ ಮಾತಿನಂತೆ ರಾವಣನ ಬಳಿ ಹೋಗುತ್ತಾನೆ. ರಾವಣ ಸಂತುಷ್ಟನಾಗಿ ನೀತಿ ಶಿಕ್ಷಣವನ್ನು ಬೋಧಿಸುತ್ತಾನೆ.

## ಪುಸ್ತಕ ಪರಿಚಯ

### ಸನಾತನ ಧರ್ಮ

**ಬೆಲೆ:** 250
**ಪ್ರಕಾಶಕರು:** ವಾಸನ್ ಪಬ್ಲಿಕೇಷನ್ಸ್

ಎಲ್ಲ ವಿದ್ಯೆಗಳಲ್ಲಿ ಅಧ್ಯಾತ್ಮ ವಿದ್ಯೆಯು ಸರ್ವಶ್ರೇಷ್ಠವೆಂಬುದು ಸತ್ಯ. ಇಂದು ಅದನ್ನೇ ನಾವು ಕಡೆಗಣಿಸಿದ್ದೇವೆ. ಜಗತ್ತಿನಲ್ಲಿಯೇ ಅತ್ಯುತ್ಕೃಷ್ಟವಾದ ಸನಾತನ ಧರ್ಮವು ಏನೆಂಬುದು ನಮ್ಮ ಬಹುತೇಕ ನವಪೀಳಿಗೆಗೆ ತಿಳಿದಿರುವುದು ಕಡಿಮೆ. 1916ರಲ್ಲಿ ವಾರಾಣಸಿಯ (ಕಾಶಿ) ಸೆಂಟ್ರಲ್ ಹಿಂದೂ ಕಾಲೇಜಿನ ವತಿಯಿಂದ




ಆ ಕಾಲದಲ್ಲಿಯೇ ಆಂಗ್ಲ ಭಾಷೆಯಲ್ಲಿ ಪ್ರಕಟಗೊಂಡ "ಸನಾತನ ಧರ್ಮ" ಪ್ರಾಥಮಿಕ ಪಠ್ಯಪುಸ್ತಕದ ಕನ್ನಡ ಅನುವಾದವೇ ಈ ಕೃತಿ. ವಾಸನ್ ಪಬ್ಲಿಕೇಷನ್ಸ್ ವತಿಯಿಂದ ಪ್ರಕಟಗೊಂಡಿದೆ.

ನಮ್ಮ ಸನಾತನ ಧರ್ಮವು ಇಂದಿಗೂ ಪ್ರಸ್ತುತ. ಧರ್ಮವೆಂದರೆ, ಅದು ಮಾನವರನ್ನು ಒಂದುಗೂಡಿಸಿ, ಉಳಿದ ಸಕಲ ಜೀವಿಗಳೊಂದಿಗೆ, ಈ ಲೋಕದಲ್ಲಿ ಹೇಗೆ ನೆಮ್ಮದಿಯಿಂದ ಬದುಕಬೇಕು ಎಂಬುದನ್ನು ಕಲಿಸುವ ಅದ್ಭುತ ವಿಧಾನವಾಗಿದೆ, ವಿಜ್ಞಾನವಾಗಿದೆ. ಅದರ ಬೇರುಗಳು ಇರುವುದೇ ಅದು ತಿಳಿಸಿಕೊಡುವ ಸದ್ಗುಣಗಳಲ್ಲಿ ಎನ್ನುವುದನ್ನು ಪುಸ್ತಕ ತಿಳಿಸುತ್ತದೆ.

ಇಲ್ಲಿಯವರೆಗೆ ಧರ್ಮ ನಿರಪೇಕ್ಷ ತತ್ವವೇ ತಮ್ಮ ರಾಜನೀತಿಯೆಂದು ಸಾರುತ್ತಿದ್ದ ಬಹುತೇಕ ಪಾಶ್ಚಾತ್ಯ ದೇಶಗಳಲ್ಲಿ, ಇಂದು ಪರೋಕ್ಷವಾಗಿ ತಮ್ಮ ತಮ್ಮ ಧರ್ಮಗಳನ್ನು ಬೆಂಬಲಿಸುತ್ತಿರುವುದು ಸರ್ವವೇದ್ಯ. ಅಲ್ಲದೇ ಆಸೆ – ಆಮಿಷಗಳಿಂದ ಮತ್ತು ಬಲಪೂರ್ವಕವಾಗಿ ಹೆದರಿಸಿ ಬೆದರಿಸಿ ಮತಾಂತರಗೊಳಿಸುವುದು ನಡೆದೇ ಇದೆ. ಜೊತೆಗೆ ಹಿಂದೂ ಧರ್ಮದ ಬಗ್ಗೆ ಅಪಪ್ರಚಾರ ಮಾಡುವ ಕೀಳು ಪ್ರವೃತ್ತಿಯೂ ಹೆಚ್ಚುತ್ತಲೇ ಇದೆ. ಅಪಪ್ರಚಾರವನ್ನು ಅಧ್ಯಾಯನದ ಮೂಲಕವೇ ಹೋಗಲಾಡಿಸಬೇಕು. ಅಂತಹ ಅಧ್ಯಯನಕ್ಕೆ ಪೂರಕ ಈ ಪುಸ್ತಕ.

ಸಂಪರ್ಕ: 6360581957

ಸಂಪಾದಕೀಯ ಸಹಕಾರ: ಸಹನಾ ಹೆಗಡೆ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ ಉದ್ಯಾವರ, ದೀಕ್ಷಿತ್ ನಾಯರ್ ಮಂಡ್ಯ, ಪಂಚಮಿ ಬಾಕಿಲಪದವು

## ಚಾರ್‌ಧಾಮ್ ಯಾತ್ರೆಗೆ ನೋಂದಣಿ ಕಡ್ಡಾಯ



ಇನ್ನು ಮುಂದೆ ಚಾರ್ ಧಾಮ್ ಯಾತ್ರೆ ಕೈಗೊಳ್ಳುವವರು ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಚಾರ್ ಧಾಮ್ ಯಾತ್ರೆಗಾಗಿ ಭಕ್ತರು ಗಂಗೋತ್ರಿ ಮತ್ತು ಯಮುನೋತ್ರಿಗೆ ಹರಿದು ಬರುತ್ತಿದ್ದು, ಹೀಗಾಗಿ ಉತ್ತರಾಖಂಡ ಸರ್ಕಾರವು ಭಕ್ತರು ಯಾತ್ರೆಗೆ ನೋಂದಣಿ ಮಾಡುವುದನ್ನು ಕಡ್ಡಾಯಗೊಳಿಸಿದೆ. ಉತ್ತರಾಖಂಡದ ಮುಖ್ಯ ಕಾರ್ಯದರ್ಶಿ ರಾಧಾ ರತುರಿ ಅವರು ಎಲ್ಲಾ ರಾಜ್ಯಗಳಿಗೆ ಪತ್ರವನ್ನು ಕಳುಹಿಸಿದ್ದು ನೋಂದಣಿ ಇಲ್ಲದ ಭಕ್ತರು ಯಾತ್ರೆಯಲ್ಲಿ ಭಾಗವಹಿಸಲು ಅನುಮತಿಸುವುದಿಲ್ಲ ಎಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ. ಯಾತ್ರಾ ಮಾರ್ಗದ ಬಳಿ ಪೊಲೀಸ್ ತಂಡಗಳು ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸುತ್ತವೆ ಮತ್ತು ನೋಂದಣಿ ಇಲ್ಲದೆ ಪ್ರಯಾಣಿಸುವ ವಾಹನಗಳನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ ಎಂದು ಅವರು ಹೇಳಿದರು.

## ಭಾರತದ ಮೊದಲ ವೃತ್ತಿಪರ ಮಹಿಳಾ ಕುಸ್ತಿಪಟುವಿನ ಸ್ಮರಣಾರ್ಥ ಗೂಗಲ್‌ನಿಂದ ವಿಶೇಷ ಡೂಡಲ್

ಭಾರತದ ಮೊದಲ ವೃತ್ತಿಪರ ಮಹಿಳಾ ಕುಸ್ತಿಪಟುವಿಗೆ ಗೂಗಲ್ ವಿಶೇಷ ಡೂಡಲ್ ಮೂಲಕ ಗೌರವಾರ್ಪಣೆ ಮಾಡಿದೆ. ಮಹಿಳಾ ಕುಸ್ತಿಪಟು ಹಮೀದಾ ಬಾನು ಅವರ ಚಿತ್ರವುಳ್ಳ ಡೂಡಲ್ ಅನ್ನು



# ಸಾಲುದ್ದದ ಸುದ್ದಿಗಳು

ವಿನ್ಯಾಸಪಡಿಸಲಾಗಿದೆ. ಬೆಂಗಳೂರು ಮೂಲದ ದಿವ್ಯಾ ನೇಗಿ ಇದನ್ನು ವಿನ್ಯಾಸ ಮಾಡಿದ್ದಾರೆ. 1940ರ ಮಾರ್ಚ್ 4 ಪುರುಷ ಪ್ರಾಬಲ್ಯ ಹೊಂದಿದ್ದ ಕುಸ್ತಿಗೆ ಮಹಿಳೆಯ ಪ್ರವೇಶವನ್ನು ನೆನಪಿಸುತ್ತದೆ. ಈ ದಿನ ಹಮೀದಾ ಪ್ರಸಿದ್ಧ ಕುಸ್ತಿಪಟು ಬಾಬಾ ಪಹಲ್ವಾನ್ ಅವರನ್ನು ಕೇವಲ 1 ನಿಮಿಷ ಮತ್ತು 34 ಸೆಕೆಂಡುಗಳಲ್ಲಿ ಸೋಲಿಸಿದರು. ಈ ಪಂದ್ಯದೊಂದಿಗೆ, ಅವರು ಅಂತರರಾಷ್ಟ್ರೀಯ ಮನ್ನಣೆ ಮತ್ತು ಮೆಚ್ಚುಗೆಯನ್ನು ಗಳಿಸಿದರು.

## 41 ಅಗತ್ಯ ಔಷಧಿಗಳ ದರ ಕಡಿತಗೊಳಿಸಿದ ಕೇಂದ್ರ

ದೇಶದ ಬಡ ಮತ್ತು ಮಧ್ಯಮ ವರ್ಗದವರಿಗೆ ಆರೋಗ್ಯ ಸೇವೆಗಳನ್ನು ಕೈಗೆಟುಕುವಂತೆ ಮಾಡುವ ನಿಟ್ಟಿನಲ್ಲಿ ಹತ್ತು ಹಲವು ಕ್ರಮಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳುತ್ತಿದೆ. ಇದೀಗ ಜನ ಸಾಮಾನ್ಯರು ಬಳಸುವ ಅತ್ಯಗತ್ಯ ಔಷಧಿಗಳ ಬೆಲೆಯಲ್ಲಿ ಕಡಿತ ಮಾಡಿದೆ. ಮಧುಮೇಹ, ಹೃದಯ ಮತ್ತು ಯಕೃತ್ತಿನ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಸಾಮಾನ್ಯವಾಗಿ ಬಳಸುವ 41 ಔಷಧಿಗಳು ಮತ್ತು ಆರು ಪರಿಕರಗಳ ಬೆಲೆಯನ್ನು ಸರ್ಕಾರ ಕಡಿತಗೊಳಿಸಿದೆ. ಈ ನಿರ್ಧಾರದಿಂದ 10 ಕೋಟಿ ಜನ ಭಾರತೀಯರಿಗೆ ಸಹಾಯವಾಗಲಿದೆ.

## ಸಿಎಎ ಅಡಿ 14 ವ್ಯಕ್ತಿಗಳಿಗೆ ಪೌರತ್ವ ಪ್ರಮಾಣಪತ್ರಗಳನ್ನು ಹಸ್ತಾಂತರಿಸಿದ ಕೇಂದ್ರ

ಸಿಎಎ ಜಾರಿಗೊಳಿಸಿದ ಸುಮಾರು ನಾಲ್ಕೂವರೆ ವರ್ಷಗಳ ನಂತರ ಪೌರತ್ವ ತಿದ್ದುಪಡಿ ಕಾಯ್ದೆ ಅಥವಾ ಸಿಎಎ ಅಡಿಯಲ್ಲಿ ಕೇಂದ್ರವು 14 ವ್ಯಕ್ತಿಗಳಿಗೆ ಪೌರತ್ವ ಪ್ರಮಾಣಪತ್ರಗಳ ಮೊದಲ ಸೆಟ್ ಅನ್ನು ಹಸ್ತಾಂತರ ಮಾಡಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಪೌರತ್ವ ಪ್ರಮಾಣಪತ್ರಗಳ ಮೊದಲ ಸೆಟ್ ಅನ್ನು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರು ನವದೆಹಲಿಯಲ್ಲಿ ಅರ್ಜಿದಾರರಿಗೆ ಹಸ್ತಾಂತರಿಸಿದರು, ಈ ವೇಳೆ ಅವರು ಪೌರತ್ವ ಪ್ರಮಾಣಪತ್ರ ಸ್ವೀಕರಿಸಿದವರನ್ನು ಅಭಿನಂದಿಸಿದರು. ಗೃಹ ಸಚಿವಾಲಯವು ಈ ವರ್ಷದ ಮಾರ್ಚ್ 11 ರಂದು ಪೌರತ್ವ



(ತಿದ್ದುಪಡಿ) ನಿಯಮಗಳು, 2024 ಅನ್ನು ಸೂಚಿಸಿದೆ. ನಿಯಮಗಳು ಅರ್ಜಿ ನಮೂನೆಯ ವಿಧಾನ, ಜಿಲ್ಲಾ ಮಟ್ಟದ ಸಮಿತಿ (DLC) ಯಿಂದ ಅರ್ಜಿಗಳನ್ನು ಪ್ರಕ್ರಿಯೆಗೊಳಿಸುವ ವಿಧಾನ ಮತ್ತು ರಾಜ್ಯ ಮಟ್ಟದ ಸಶಕ್ತ ಸಮಿತಿ (EC) ಯಿಂದ ಪೌರತ್ವದ ಪರಿಶೀಲನೆ ಮತ್ತು ಅನುದಾನವನ್ನು ಕಲ್ಪಿಸುತ್ತದೆ.

## T20 ವಿಶ್ವಕಪ್‌ಗಾಗಿ ಸ್ಕಾಟ್ಲೆಂಡ್ ಕ್ರಿಕೆಟ್ ತಂಡಕ್ಕೆ ಕರ್ನಾಟಕದ 'ನಂದಿನಿ' ಪ್ರಾಯೋಜಕತ್ವ




ಮುಂಬರುವ **T20** ವಿಶ್ವಕಪ್‌ಗಾಗಿ ಸ್ಕಾಟ್ಲೆಂಡ್ ಕ್ರಿಕೆಟ್ ತಂಡದ ಮ್ಯಾನೇಜ್‌ಮೆಂಟ್ ತನ್ನ ಜೆರ್ಸಿಯನ್ನು ಕರ್ನಾಟಕದ ನಂದಿನಿ ಡೈರಿಯ ಲೋಗೋದೊಂದಿಗೆ ಅನಾವರಣಗೊಳಿಸಿದೆ. ನಂದಿನಿ ಬ್ರಾಂಡ್ ಅನ್ನು ನಡೆಸುತ್ತಿರುವ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಸ್ಕಾಟ್ಲೆಂಡ್ ತಂಡದ ಅಧಿಕೃತ ಪ್ರಾಯೋಜಕನಾಗಿದೆ ಮತ್ತು ನಂದಿನಿ ಹಾಲಿನ ಬ್ರ್ಯಾಂಡ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾಣಿಸಿಕೊಂಡಿರುವುದು ಇದೇ ಮೊದಲು.

# 100% ಪರಿಸರ ಪೂರಕ ಲೇಖನಿ ಕಂಡುಹಿಡಿದ ದಂಪತಿ

ಪ್ರಕೃತಿ ಇಲ್ಲದೇ ಮನುಕುಲವಿಲ್ಲ ಎನ್ನುವುದನ್ನು ಅರಿತು ಪರಿಸರದ ಉಳಿವಿಗೆ ಪೂರಕವಾಗಿ ನಮ್ಮ ತಂತ್ರಜ್ಞಾನಗಳು, ಅಭಿವೃದ್ಧಿಗಳು ಇರುವಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯ. ಆದರೆ ಅನೇಕ ಬಾರಿ ಮರವನ್ನು ಕಡಿಯುವುದೇ ಅಭಿವೃದ್ಧಿಯೆಡೆಗಿನ ಪ್ರಥಮ ಹೆಜ್ಜೆ. ಕಂಡು ಹುಡುಕಿದ ವಸ್ತುಗಳು ಪರಿಸರಕ್ಕೆ ಮಾರಕವಾದರೇನಂತೆ, ನಮಗೆ ಉಪಕಾರಿಯಾದರೆ ಸಾಕು ಎಂಬ ಸ್ವಾರ್ಥವೇ ಹೆಚ್ಚಿರುತ್ತದೆ. ಆದರೆ ಅದಕ್ಕೆ ಅಪವಾದವೆಂಬಂತಿದೆ ದೆಹಲಿಯ ದಂಪತಿಯ ಈ ಸಂಶೋಧನೆ.

ವಿಶ್ವದ ಬಹುದೊಡ್ಡ ವಿದ್ಯಾರ್ಥಿ ಸಮೂಹವನ್ನು ಒಳಗೊಂಡ ರಾಷ್ಟ್ರ ಭಾರತ. ಇಲ್ಲಿನ ಯುವ ಸಮೂಹ ಬಳಸುವ ಲೇಖನಿಗಳು ಹೆಚ್ಚು ಪ್ಲಾಸ್ಟಿಕ್ ಅಂಶವನ್ನು ಒಳಗೊಂಡಿದ್ದು ಪರಿಸರಕ್ಕೆ ಮಾರಕ ಎನ್ನುವುದನ್ನು ಸರ್ವರೂ ಬಲ್ಲರು. ಆದರೆ ದೆಹಲಿಯ ಸೌರಭ್ ಮೆಹ್ತಾ ಮತ್ತು ಶಿವಾನಿ ಮೆಹ್ತಾ ಇದಕ್ಕೆ ಪರ್ಯಾಯವನ್ನು ಕಂಡುಹಿಡಿದರು. ಅವರು ಪ್ಲಾಸ್ಟಿಕ್‌ಯುಕ್ತ ಲೇಖನಿಗಳ ಕಾರ್ಯದ ಉದ್ದೇಶ ಸಫಲವಾಗುತ್ತಿರುವುದು ಕೇವಲ ಶೇ.5ರಷ್ಟು ಎನ್ನುವುದನ್ನು ಅರಿತು 2018–2019ರಲ್ಲಿ ಸ್ಟಾರ್ಟ್‌ಅಪ್ ಜೈವಿಕ ವಿಘಟನೀಯ ಪೆನ್ನುಗಳ ಕುರಿತು ಸಂಶೋಧನೆಯನ್ನು ಪ್ರಾರಂಭಿಸಿದರು. ಶೇಕಡ 100ರಷ್ಟು ಪರಿಸರಕ್ಕೆ ಪೂರಕವಾದ ಪೆನ್ ಮತ್ತು ಪೆನ್ಸಿಲ್‌ಗಳನ್ನು ನಿರ್ಮಿಸಲು ಪಣತೊಟ್ಟರು. ತಮ್ಮ ಪರಿಸರ ಕಾಳಜಿಯುಳ್ಳ ಈ ಸಂಶೋಧನೆಯು ಕೇಂದ್ರ ಸರ್ಕಾರದ ಸ್ಟಾರ್ಟ್‌ಅಪ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ₹16 ಲಕ್ಷ ಅನುದಾನಕ್ಕೆ ಭಾಜನವಾಯಿತು. ಮಾತ್ರವಲ್ಲದೆ ಈ ಬಾರಿಯ ವಿಶ್ವ ಪರಿಸರ ದಿನದಂದು (ಜೂನ್ 5) ಈ ವಿನೂತನ ಉತ್ಪನ್ನವು ಬಿಡುಗಡೆಗೊಳ್ಳಲು ಸಿದ್ಧವಾಗಿದೆ.






ತಮ್ಮ ಆವಿಷ್ಕಾರದ ಆರಂಭದ ದಿನಗಳಲ್ಲಿ ಇವರಿಗೆ ಎದುರಾದ ಸವಾಲು ರೀಫಿಲ್ ಸೋರಿಕೆ. ಹಾಗಾಗಿ ರೀಫಿಲ್ ಒಳಗಡೆ ತುಂಬುವ ಶಾಯಿಯ ಕುರಿತಾಗಿ, 2024ರಲ್ಲಿ ಮಾಡಿದ ಸಂಶೋಧನೆಯು, ಸಸ್ಯಜನ್ಯ ಎಣ್ಣೆಯನ್ನು ರೀಫಿಲ್ ಒಳಗೆ ತಡೆಗೋಡೆಯಾಗಿ ಬಳಸಿ, ಶಾಯಿ ಸೋರಿಕೆಯಾಗದಂತೆ ತಡೆಯುವ ಮೂಲ ದೀರ್ಘಕಾಲ ಬಾಳಿಕೆ ಬರುವಂತೆ ಮಾಡಲಾಗಿದೆ. ಪೆನ್ನುಗಳನ್ನು ತಯಾರಿಸುವಾಗ ಪ್ಲಾಸ್ಟಿಕ್ ಬದಲಿಗೆ ಮರವನ್ನು ಬಳಸುವುದು ಉತ್ತಮವೇ? ಎನ್ನುವ ಪ್ರಶ್ನೆ ಎದುರಾಗುತ್ತದೆ. ಹಿಂದೆ ಮರಕ್ಕೆ ಬದಲಿಯಾಗಿ ಪ್ಲಾಸ್ಟಿಕ್ ಬಂದಿತು. ಈಗ ಪ್ಲಾಸ್ಟಿಕ್ ಬದಲಿಯಾಗಿ ಬಂದ ಮರದಿಂದ ಮತ್ತೊಂದು ಸಮಸ್ಯೆ ಸೃಷ್ಟಿಯಾಗುತ್ತದೆಯೇ ವಿನಃ ಪರಿಹಾರ ಸಿಕ್ಕಂತಾಗುವುದಿಲ್ಲ. ಹಾಗಾಗಿ ಮರದ ಪೆನ್ ಬದಲು ಬಿದಿರು ಮತ್ತು ಶಿಲೆಗಳಿಂದ ಪೆನ್ನನ್ನು ತಯಾರಿಸುವ ನಿರ್ಧಾರ ಮಾಡಿದರು. ಸೀಮಿತ ಸಾಮರ್ಥ್ಯದ ಕಾರಣಗಳಿಂದ ಪ್ರಸಕ್ತ ವರ್ಷ 1–2 ಮಿಲಿಯನ್ ಪೆನ್ನುಗಳನ್ನು ಮಾರಾಟ ಮಾಡುವ ಗುರಿ ಹೊಂದಿದ್ದಾರೆ. ಪ್ರಸ್ತುತ ರೂ.25ರಿಂದ ರೂ.500ರವರೆಗಿನ ಪೆನ್ನುಗಳನ್ನು ಸುಸ್ಥಿರತೆಗೆ ಧಕ್ಕೆ ಬಾರದಂತೆ ನಿರ್ಮಿಸಲಾಗುತ್ತಿದೆ.

ಆವಿಷ್ಕಾರಕ್ಕೆ ಪೂರಕವಾದ ಆಲೋಚನೆ ಮತ್ತು ಪರಿಸರದ ಉಳಿತಿಗಾಗಿ ಸುಸ್ಥಿರವಾದ ಪರಿಹಾರಗಳನ್ನು ಕಂಡು ಹಿಡಿಯಬೇಕೆಂಬ ಬದ್ಧತೆ ಇಂತಹ ವಿನೂತನ ಕಲ್ಪನೆಗಳಿಗೆ ಸಾಕ್ಷಿಯಾಗುತ್ತವೆ.

# ಅಂಗಾಂಗ ಕಸಿಯಲ್ಲಿ ಮೈಲಿಗಲ್ಲು

ಕರ್ನಾಟಕದಲ್ಲಿ ಉಚಿತ ಅಂಗಾಂಗ ಕಸಿ ಮಾಡಿಸಿಕೊಂಡವರ ಸಂಖ್ಯೆ 292 ಆಗಿದ್ದು ಇದರೊಂದಿಗೆ ರಾಜ್ಯ ಅಂಗಾಂಗ ಕಸಿ ಯೋಜನೆಯು ಹೊಸ ಮೈಲಿಗಲ್ಲು ಸ್ಥಾಪಿಸುವತ್ತ ಸಾಗುತ್ತಿದೆ. ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳ 292 ರೋಗಿಗಳು ಉಚಿತ ಅಂಗಾಂಗ ಕಸಿ ಮಾಡಿಸಿ ಕೊಂಡಿದ್ದಾರೆ.ಯೋಜನೆಯಡಿ ಈವರೆಗೂ 217 ಮೂತ್ರಪಿಂಡ, 41 ಯಕೃತ್ ಹಾಗೂ 34 ಹೃದಯ ಕಸಿ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ನಡೆಸಲಾಗಿದೆ. ಕಳೆದ ಐದು ವರ್ಷಗಳಲ್ಲಿ ಉಚಿತ ಕಸಿ ಮತ್ತು ಜೀವರಕ್ಷಕ (ಇಮ್ಯುನೊಸಪ್ರೆಸಿಸ್ ಮೆಡಿಸಿನ್) ಔಷಧಗಳ ಪೂರೈಕೆಗೆ 12 ಕೋಟಿ ರೂ.ಗೂ ಅಧಿಕ ಖರ್ಚು ಮಾಡಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಅಂಗಾಂಗ ವೈಫಲ್ಯಕ್ಕೆ ಒಳಗಾದ ಸಂದರ್ಭದಲ್ಲಿ ಮೃತ ದಾನಿ (ಮಿದುಳು ನಿಷ್ಕ್ರಿಯ ಗೊಂಡ)ಗಳು ಇಲ್ಲವೇ ಸಂಬಂಧಿಕರಿಂದ ಅಂಗಾಂಗ ಪಡೆದು ಕಸಿ ಮಾಡಿಸಿ ಕೊಳ್ಳಲು ಈ ಯೋಜನೆ ಸಹಕಾರಿಯಾಗಿದ್ದು, ನೂರಾರು ಮಂದಿ ಮರುಜೀವ ಪಡೆದಿದ್ದಾರೆ.

ಆಯುಷ್ಮಾನ್ ಭಾರತ – ಆರೋಗ್ಯ ಕರ್ನಾಟಕ (ಎಬಿಎಆರ್‌ಕೆ) ಯೋಜನೆಯಡಿ ರಾಜ್ಯ ಅಂಗಾಂಗ ಕಸಿ ಇರಲಿಲ್ಲ. ಕಾರಣ, ಸರ್ಕಾರವು 2018ರ ಡಿ.3ರಂದು ಪ್ರತ್ಯೇಕ ಯೋಜನೆ ಆರಂಭಿಸಿತು. ಇದರಡಿ ಎಲ್ಲ ಬಿಪಿಎಲ್ ಕಾರ್ಡ್‌ವುಳ್ಳ ರೋಗಿಗಳಿಗೆ ಸರ್ಕಾರಿ ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ಅವಕಾಶ ಕಲ್ಪಿಸಿತು. ಮೂತ್ರಪಿಂಡ, ಯಕೃತ್ ಮತ್ತು ಹೃದಯ ಕಸಿ ಯೋಜನೆ ಗಾಗಿ 2019ರ ಬಜೆಟ್‌ನಲ್ಲಿ ₹30 ಕೋಟಿ ಮೀಸಲಿಟ್ಟಿತ್ತು. ಸರ್ಕಾರದಡಿ ಬರುವ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆ, ನೆಫ್ರೋ ಯುರಾಲಜಿ ಸಂಸ್ಥೆ (ಐಎನ್ ಯು), ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟರಾಲಜಿ ಸೈನ್ಸ್ ಆ?ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ (ಐಜಿಒಟಿ) ಮತ್ತು ಹುಬ್ಬಳ್ಳಿಯ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಕಿಮ್ಸ್ ಹಾಗೂ ಖಾಸಗಿ ಸೇರಿ ರಾಜ್ಯದ 42 ಆಸ್ಪತ್ರೆಗಳು ಯೋಜನೆಯಡಿ ಚಿಕಿತ್ಸೆ ನೀಡಲು ನೋಂದಣಿಯಾಗಿವೆ

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th MAY 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-06-2024



## ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ : ಪ್ರಮುಖ ಆರೋಪಿ ಮುಸ್ತಫಾ ಪೈಚಾರ್ ಬಂಧನ

ಎರಡು ವರ್ಷಗಳ ಹಿಂದೆ ಜಿಹಾದಿಗಳ ಕ್ರೂರತ್ವಕ್ಕೆ ಬಲಿಯಾದ ಬಿಜೆಪಿ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ತನಿಖಾ ಸಂಸ್ಥೆಗೆ ಬಹುದೊಡ್ಡ ಮುನ್ನಡೆ ದೊರೆತಿದೆ. ಪ್ರಕರಣದ ಪ್ರಮುಖ ಆರೋಪಿಯನ್ನು ಎನ್ಐಎ ಅಧಿಕಾರಿಗಳು ಬಂಧಿಸಿದ್ದಾರೆ. ಮುಸ್ತಫಾ ಪೈಚಾರ್ ಬಂಧಿತ ಪ್ರಮುಖ ಆರೋಪಿಯಾಗಿದ್ದು, ಸಕಲೇಶಪುರದಲ್ಲಿ ಆತನನ್ನು ಬಂಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ದಳ (NIA) ಮೂಲಗಳು ತಿಳಿಸಿವೆ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಸಮೀಪದ ಪೆರುವಾಜೆ ಕ್ರಾಸ್ ಬಳಿ ಅಕ್ಷಯ್ ಕೋಳಿ ಅಂಗಡಿ ಹೊಂದಿದ್ದ ಪ್ರವೀಣ್ ಕುಮಾರ್ ಅವರು ಜುಲೈ 26 ರಂದು ರಾತ್ರಿ 8 ಗಂಟೆಗೆ ಅಂಗಡಿ ಮುಚ್ಚಿ ಮನೆ ಕಡೆ ಹೊರಟಿದ್ದ ವೇಳೆ ಬೈಕಿನಲ್ಲಿ ಬಂದಿದ್ದ ಮೂವರು ತಲ್ವಾರ್‌ನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದರು. ಈ ಪ್ರಕರಣ ರಾಜ್ಯವ್ಯಾಪಿ ಕೋಲಾಹಲವನ್ನು ಸೃಷ್ಟಿಸಿತ್ತು. ಬಳಿಕ ಅಂದಿನ ಬಿಜೆಪಿ ಸರ್ಕಾರ ಪ್ರಕರಣವನ್ನು ಎನ್ಐಎಗೆ ವಹಿಸಿತ್ತು. ಕಳೆದ ವರ್ಷ ಜನವರಿಯಲ್ಲಿ ಎನ್ಐಎ 20 ಜನರ ವಿರುದ್ಧ ಆರೋಪಪಟ್ಟಿ ಸಲ್ಲಿಸಿತ್ತು. ಎನ್ಐಎ ಚಾರ್ಜ್‌ಶೀಟ್‌ನ ಪ್ರಕಾರ, ಒಂದು ಸಮುದಾಯದ ಸದಸ್ಯರಲ್ಲಿ ಭಯವನ್ನು ಸೃಷ್ಟಿಸಲು ಮತ್ತು ಸಮಾಜದಲ್ಲಿ ಕೋಮು ದ್ವೇಷ, ಅಶಾಂತಿಯನ್ನು ಸೃಷ್ಟಿಸಲು ಪಿಎಫ್ಐನ ಕಾರ್ಯಸೂಚಿಯ ಭಾಗವಾಗಿ ನೆಟ್ಟಾರು ಅವರನ್ನು ಹತ್ಯೆ ಮಾಡಲಾಗಿದೆ ಎಂದು ತಿಳಿದು ಬಂದಿತ್ತು. ಇದೀಗ ಪ್ರಮುಖ ಆರೋಪಿಯನ್ನು ಬಂಧಿಸಲಾಗಿದೆ.

## ದೇವಾಲಯಗಳು ಗ್ರಂಥಾಲಯಗಳನ್ನು ಸ್ಥಾಪಿಸಬೇಕು : ಎಸ್.ಸೋಮನಾಥ್

ದೇವಾಲಯಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಲು ಇಸ್ರೋ ಅಧ್ಯಕ್ಷ ಎಸ್ ಸೋಮನಾಥ್ ಸಲಹೆ ನೀಡಿದ್ದು, ಇಂತಹ ಉಪಕ್ರಮವು



ಯುವಕರನ್ನು ಧಾರ್ಮಿಕ ಸ್ಥಳಗಳಿಗೆ ಆಕರ್ಷಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ. ತಿರುವನಂತಪುರಂನ ಶ್ರೀ ಉದಿಯನ್ನೂರು ದೇವಿ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸೋಮನಾಥ್ ಅವರು "ದೇವಾಲಯಗಳು ಕೇವಲ ದೇವರ ನಾಮಸ್ಮರಣೆಗಾಗಿ ಬರುವ ಸ್ಥಳಗಳಾಗದೆ ಸಮಾಜವನ್ನು ಪರಿವರ್ತಿಸುವ ಸ್ಥಳಗಳಾಗಬೇಕು. ಯುವಜನರನ್ನು ದೇವಸ್ಥಾನಗಳತ್ತ ಆಕರ್ಷಿಸುವ ನಿಟ್ಟಿನಲ್ಲಿ ದೇಶಾದ್ಯಂತ ದೇವಸ್ಥಾನ ಆಡಳಿತ ಮಂಡಳಿಗಳು ಕೆಲಸ ಮಾಡಬೇಕು ಎಂದು ಅಭಿಪ್ರಾಯಪಟ್ಟರು. ಪ್ರತಿ ದೇವಾಲಯದಲ್ಲಿ ಗ್ರಂಥಾಲಯಗಳನ್ನು ನಿರ್ಮಿಸುವಂತಹ ಉಪಕ್ರಮವು ಯುವಕರನ್ನು ದೇವಾಲಯಗಳತ್ತ ಆಕರ್ಷಿಸಲು ಸಹಾಯ ಮಾಡುತ್ತದೆ. ಅಲ್ಲಿ ಅವರು ಓದಲು, ಸಂಜೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲು ಮತ್ತು ಅವರ ವೃತ್ತಿಯನ್ನು ಅಭಿವೃದ್ಧಿಪಡಿಸಲು ಸಹಾಯವಾಗುತ್ತದೆ ಎಂದರು.

## ಸೀತಾ ಮಾತೆಗೆ ಭವ್ಯ ದೇಗುಲ

ಅಯೋಧ್ಯೆಯಲ್ಲಿ ಭವ್ಯ ಶ್ರೀರಾಮ ಮಂದಿರ ನಿರ್ಮಾಣವಾಗಿದೆ. ಇನ್ನೀಗ ಬಿಹಾರದ ಸೀತಾಮಡಿಯಲ್ಲಿ ಸೀತಾಮಾತೆಯ ದೇಗುಲವನ್ನು ನಿರ್ಮಿಸಲಾಗುವುದು ಎಂದು ಬಿಹಾರದ ಸೀತಾಮಡಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನುಡಿದರು. ಸೀತಾಮಾತೆಯ ಜನ್ಮಸ್ಥಾನವಾದ ಬಿಹಾರದ ಸೀತಾಮಡಿ ಜಿಲ್ಲೆಯ ಪನೌರಾ



ಧಾಮ್ ಮಂದಿರವನ್ನು ಅಂತಾರಾಷ್ಟ್ರೀಯ ಯಾತ್ರಾ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಅಂತೆಯೇ ಸೀತಾ ಮಂದಿರದ ಅಭಿವೃದ್ಧಿಗಾಗಿ ಬಿಹಾರದ ರಾಜ್ಯ ಸರ್ಕಾರ 72.47 ಕೋಟಿ ರೂ. ಮಂಜೂರು ಮಾಡಿದೆ.

## ಭಾರತೀಯರಾದ ಬಳಿಕ ಘನತೆಯ ಜೀವನ ದೊರೆತಿದೆ

ಪೌರತ್ವ ತಿದ್ದುಪಡಿ ಕಾಯ್ದೆ ಅನ್ವಯ ಮೊದಲನೆಯವರಾಗಿ ಭಾರತದ ಪೌರತ್ವ ಪಡೆದವರು ಸಂತಸ ಹಂಚಿಕೊಂಡಿದ್ದಾರೆ. ಮೊದಲಿಗರಾಗಿ ಪೌರತ್ವ ಪಡೆದ 14 ಮಂದಿ ಪೈಕಿ ಒಬ್ಬರಾದ 24 ವರ್ಷದ ಭರತ್ ಕುಮಾರ್, ಪಾಕಿಸ್ತಾನದಲ್ಲಿನ ಧಾರ್ಮಿಕ ಕಿರುಕುಳದಿಂದ ಪಾರಾಗಲು 11 ವರ್ಷಗಳ ತಮ್ಮ ಕಾಯುವಿಕೆ ಅಂತ್ಯವಾದ ಸಂತೋಷವನ್ನು ಹಂಚಿಕೊಂಡರು. 'ಭಾರತೀಯ ಎನಿಸಿಕೊಂಡಿರುವುದು ಒಂದು ಅದ್ಭುತ ಅನುಭವ. ಭಾರತೀಯತೆ ನನಗೆ ಈಗ ಹೊಸ ಬದುಕು ನೀಡಿದೆ. ಮುಂದಿನ ಚುನಾವಣೆಯಲ್ಲಿ ನಾನು ಭಾರತೀಯನಾಗಿ ಮತ ಚಲಾಯಿಸಬಹುದು' ಎಂದ ಭರತ್, ಪಾಕಿಸ್ತಾನದಲ್ಲಿನ ಕಿರುಕುಳ ತಡೆಯಲಾಗದೆ ಭಾರತಕ್ಕೆ ಬಂದ ಅನುಭವವನ್ನೂ ಹಂಚಿಕೊಂಡಿದ್ದಾರೆ. 'ಪಾಕಿಸ್ತಾನದಲ್ಲಿ ಇರುವುದು ಭಯಾನಕವಾಗಿದ್ದರಿಂದ ನಾವು ಭಾರತಕ್ಕೆ ಬರಬೇಕಾಯಿತು. ನಾವು ಇಲ್ಲಿಗೆ ಬಂದಿದ್ದಾಗ ನನಗೆ 13 ವರ್ಷ. ನಾವು ಇಲ್ಲಿ ಮಜ್ನು ಕಾ ಟಿಲಾ ಪ್ರದೇಶದಲ್ಲಿ ವಾಸವಾಗಿದ್ದು, ಅಲ್ಲಿನ ನೂರಾರು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಆ ಪೈಕಿ ಐವರಿಗೆ ಪೌರತ್ವ ಸಿಕ್ಕಿದೆ' ಎಂದು ಭರತ್ ತಿಳಿಸಿದರು. "ನಮ್ಮ ಕುಟುಂಬದ 19 ಮಂದಿ 2013ರಲ್ಲಿ ಪಾಕ್‌ನ ಸಿಂಧ್ ಪ್ರಾಂತ್ಯದಿಂದ ಭಾರತಕ್ಕೆ ಬಂದಿದ್ದೆವು. ಆ ಪೈಕಿ ನಮ್ಮಲ್ಲಿ ಮೂವರಿಗೆ ಪೌರತ್ವ ಸಿಕ್ಕಿದೆ. ಸರ್ಕಾರ ನಮ್ಮ ಬಯಕೆ ಈಡೇರಿಸಿದ್ದಕ್ಕೆ ಸಂತೋಷವಾಗಿದೆ. ನಾನೀಗ ಭಾರತೀಯನಾಗಿ ಘನತೆಯ ಜೀವನ ಸಾಗಿಸಬಹುದು" ಎಂದು ಇನ್ನೊಬ್ಬ ಫಲಾನುಭವಿ ಸೀತಲ್ ದಾಸ್ ಹೇಳಿಕೊಂಡಿದ್ದಾರೆ. "ಪೌರತ್ವಕ್ಕಾಗಿ ನನ್ನ ಸುದೀರ್ಘ ಕಾಯುವಿಕೆ ಅಂತ್ಯಗೊಂಡಿದೆ. ನನಗೆ ತುಂಬಾ ಖುಷಿಯಾಗಿದೆ" ಎಂದು ಯಶೋದಾ ಎಂಬಾಕೆ ಹೇಳಿಕೊಂಡಿದ್ದಾರೆ.

## ಎಲ್‌ಟಿಟಿಇ ಮೇಲಿನ ನಿಷೇಧವನ್ನು 5 ವರ್ಷ ವಿಸ್ತರಿಸಿದ ಕೇಂದ್ರ ಸರ್ಕಾರ

ತಮಿಳುನಾಡು ಒಳಗೊಂಡಂತೆ ದೇಶದಲ್ಲಿ ಪ್ರತ್ಯೇಕ ದೇಶ ಬೇಡಿಕೆಯ ಪ್ರವೃತ್ತಿ ಬಿತ್ತುತ್ತಿರುವ ಹಾಗೂ ಭಾರತದ ಸಾರ್ವಭೌಮತೆಗೆ ಧಕ್ಕೆ ತರುವ ಉದ್ದೇಶ ಹೊಂದಿರುವ ಎಲ್‌ಟಿಟಿಇ ಸಂಘಟನೆ ಮೇಲಿನ ನಿಷೇಧವನ್ನು ಮುಂದಿನ ಐದು ವರ್ಷಗಳಿಗೆ ಕೇಂದ್ರ ಸರ್ಕಾರ ವಿಸ್ತರಿಸಿದೆ.

'ಎಲ್‌ಟಿಟಿಇ ಶ್ರೀಲಂಕಾ ಮೂಲದ್ದೇ ಆದರೂ, ಅದರ ಬೆಂಬಲಿಗರು ಮತ್ತು ಏಜೆಂಟರು ಭಾರತದ ನೆಲದೊಳಗೆ ಇದ್ದಾರೆ. ಇವರ ಕಾರ್ಯಾಚರಣೆ ಈಗಲೂ ದೇಶದೊಳಗೆ ನಡೆಯುತ್ತಿರುವ ಸಾಧ್ಯತೆ ಇದ್ದು, ಇದು ಭಾರತದ ಸಮಗ್ರತೆ ಮತ್ತು ಭದ್ರತೆಗೆ ಧಕ್ಕೆಯುಂಟು ಮಾಡುವ ಅಪಾಯವಿದೆ. 2009ರಲ್ಲಿ ಶ್ರೀಲಂಕಾದಲ್ಲಿ ನಡೆದ ಸೇನಾ ಕಾರ್ಯಾಚರಣೆಯಲ್ಲಿ ಪರಾಭವಗೊಂಡ ಬಳಿಕವೂ, ತಮಿಳರ ಪ್ರತ್ಯೇಕ ರಾಷ್ಟ್ರದ ಪರಿಕಲ್ಪನೆ (ಈಳಂ)ಯಿಂದ ಎಲ್‌ಟಿಟಿಇ ವಿಮುಖವಾಗಿಲ್ಲ. ಈ ನಿಟ್ಟಿನಲ್ಲಿ ನಿಧಿ ಸಂಗ್ರಹ ಮತ್ತು ಪ್ರಚಾರ ಕಾರ್ಯದಲ್ಲಿ ಈ ಸಂಘಟನೆಯ ಮುಖಂಡರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹರಿದು ಹಂಚಿಹೋಗಿರುವವರನ್ನು ಸಂಘಟಿಸಿ ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ಕಟ್ಟುವ ಕೆಲಸ ಮಾಡುತ್ತಿದ್ದಾರೆ' ಎಂದಿದೆ.

'ದೇಶದ್ರೋಹಿ ಕೆಲಸದೊಂದಿಗೆ ಮಾದಕದ್ರವ್ಯದ ಕಳ್ಳಸಾಗಣೆ, ಶಸ್ತ್ರಾಸ್ತ್ರ ಪೂರೈಕೆಯಂತ ಅಕ್ರಮ ಚಟುವಟಿಕೆಗಳಲ್ಲೂ ಈ ಗುಂಪು ಸಕ್ರಿಯವಾಗಿದೆ. ಇವೆಲ್ಲವೂ ಈ ನೆಲದ ಕಾನೂನಿಗೆ ವಿರುದ್ಧವಾದದ್ದಾಗಿವೆ. ಹೀಗಾಗಿ ಈ ಸಂಘಟನೆ ಮೇಲಿರುವ ನಿಷೇಧವನ್ನು ಮುಂದಿನ ಐದು ವರ್ಷಗಳಿಗೆ ವಿಸ್ತರಿಸಲಾಗಿದೆ' ಎಂದು ಕೇಂದ್ರ ಗೃಹ ಇಲಾಖೆ ಹೇಳಿದೆ.

## ವೈಟ್‌ಹೌಸಲ್ಲಿ ಸಾರೇ ಜಹಾಂಸೇ ಅಚ್ಛಾ!

ವಾಷಿಂಗ್ಟನ್: ಅಮೆರಿಕದಲ್ಲಿ ಭಾರತಕ್ಕೆ ಮತ್ತೊಮ್ಮೆ ಜೈಕಾರ ಸಿಕ್ಕಿದೆ. ಅಧ್ಯಕ್ಷ ಜೋ ಬೈಡೆನ್ ಮತ್ತು ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ಸಾರೇ ಜಹಾಂಸೇ ಅಚ್ಛಾ ಹಿಂದುಸ್ತಾನ್ ಹಮಾರಾ' ಹಾಡು ಝೇಂಕರಿಸಿದೆ. ನೂರಾರು ಏಷ್ಯನ್ ಅಮೇರಿಕನ್ನರ ಸಮ್ಮುಖದಲ್ಲಿ ನಡೆದ ವಾರ್ಷಿಕ ಏಷ್ಯನ್ ಅಮೇರಿಕನ್, ನೇಟಿವ್ ಹವಾಯಿಯನ್ ಮತ್ತು ಪೆಸಿಫಿಕ್ ಐಲ್ಯಾಂಡರ್ (ಎಎಎನ್ಎಚ್‌ಪಿಐ) ಪರಂಪರೆ ಮಾಸ ಸಮಾರಂಭದಲ್ಲಿ ಕವಿ ಮಹಮದ್ ಇಕ್ಬಾಲ್ ಬರೆದಿದ್ದ ಈ ದೇಶಭಕ್ತಿ ಹಾಡನ್ನು ಶ್ವೇತ ಭವನದ ಮೈರನ್ ಬ್ಯಾಂಡ್ ಎರಡು ಬಾರಿ ನುಡಿಸಿ ಗೌರವಿಸಿತು.



ಅಮೆರಿಕನ್ ಸಂಸ್ಕೃತಿಯ ಕಾರ್ಯಕ್ರಮ ಇದಾದರೂ ಬೈಡೆನ್ ಆಹ್ವಾನ ನೀಡಿದ್ದ ಭಾರತೀಯ ಅಮೆರಿಕನ್ನರ ಕೋರಿಕೆ ಮೇರೆಗೆ ಈ ಹಾಡನ್ನು ಎರಡು ಬಾರಿ ನುಡಿಸಲಾಯಿತು. ಆಹ್ವಾನಿತರು ಶ್ವೇತ ಭವನ ಪ್ರವೇಶಿಸುತ್ತಿದ್ದಂತೆ 'ಸಾರೇ ಜಹಾಂಸೆ ಅಚ್ಛಾ ಹಿಂದುಸ್ತಾನ್ ಹಮಾರಾ' ಗಾನ ಮೊಳಗಿದ್ದಕ್ಕೆ ಸಮಾರಂಭದಲ್ಲಿ ಭಾರಿ ಮೆಚ್ಚುಗೆ ವ್ಯಕ್ತವಾಯಿತೆಂದು ಭಾರತೀಯ ಅಮೆರಿಕನ್ ಸಮುದಾಯದ ನಾಯಕ ಅಜಯ್ ಜೈನ್ ಭುತೋರಿಯಾ ಹರ್ಷ ವ್ಯಕ್ತಪಡಿಸಿದ್ದಾರೆ. ಕಳೆದ ವರ್ಷ ಜೂನ್ 23ರಂದು ಪ್ರಧಾನಿ ನರೇಂದ್ರ ಮೋದಿ ಅಮೆರಿಕಕ್ಕೆ ಅಧಿಕೃತ ಭೇಟಿ ನೀಡಿದ್ದಾಗಲೂ ಈ ದೇಶಭಕ್ತಿ ಗೀತೆ ಮೊಳಗಿಸಲಾಗಿತ್ತು.

## ಭಾರತೀಯ ಸಾಹಿತ್ಯಕ್ಕೆ ಯುನೆಸ್ಕೋ ಮನ್ನಣೆ

ಯುನೆಸ್ಕೋ ಸ್ಥಾಪಿಸಿದ ಮೆಮೊರಿ ಆಫ್ ದಿ ವರ್ಲ್ಡ್(ಎಂಒಡಬ್ಲ್ಯು) ರಿಜಿಸ್ಟರ್, ದಾಖಲೆಗಳು, ಹಸ್ತಪ್ರತಿಗಳು, ಆಡಿಯೋ ವಿಶ್ಯುವಲ್ ಸಾಮಗ್ರಿಗಳ ಗ್ರಂಥಾಲಯ ಸಂಗ್ರಹವಾಗಿದೆ. ರಿಜಿಸ್ಟರ್‌ನಲ್ಲಿನ ಶಾಸನವು ನಿರ್ದಿಷ್ಟ ಕೃತಿ ಅಥವಾ ರಚನೆ ಬಗೆಗಿನ ಸಾಂಸ್ಕೃತಿಕ, ಐತಿಹಾಸಿಕ ಮತ್ತು ಸಾಮಾಜಿಕ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ. ರಿಜಿಸ್ಟರ್ ನಲ್ಲಿ ಈಗ ಭಾರತದ ರಾಮಚರಿತಮಾನಸ, ಪಂಚತಂತ್ರ ಮತ್ತು ಸಹೃದಯಲೋಕ-ಲೋಕಾನ ಮೇರು ಕೃತಿಗಳು ಸೇರ್ಪಡೆಗೊಂಡಿವೆ. ಈ ಸೇರ್ಪಡೆಯು ಜಾಗತಿಕ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂರಕ್ಷಣೆಯ ಉದ್ದೇಶ ಹೊಂದಿರುವ ಯುನೆಸ್ಕೋದ ಪ್ರಯತ್ನಗಳನ್ನು ಸೂಚಿಸುತ್ತದೆ. ಈ ಸಾಹಿತ್ಯ ಕೃತಿಗಳು ಕಾಲಾತೀತವಾಗಿದ್ದು, ಭಾರತವಷ್ಟೇ ಅಲ್ಲದೆ, ವಿಶ್ವಾದ್ಯಂತ ಸಾಹಿತ್ಯಿಕ ಸಂಪ್ರದಾಯಗಳು ಮತ್ತು ಕಲಾತ್ಮಕ ಅಭಿವ್ಯಕ್ತಿಗಳ ಮೇಲೆ ಪ್ರಭಾವ ಬೀರಿವೆ. ಆ ಮೂಲಕ ಈ ಕೃತಿಗಳ ನಿರಂತರ ಪ್ರಸ್ತುತತೆ ಮತ್ತು ಪ್ರಭಾವಕ್ಕೆ ಸಾಕ್ಷಿಯಾಗಿದೆ. ಜಾಗತಿಕವಾಗಿ ಈ ಉಪಕ್ರಮಕ್ಕೆ 2023ರ ಮೇ ವರೆಗೆ 494 ಶಾಸನಗಳು ಸೇರ್ಪಡೆಗೊಂಡಿವೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021